# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5006/2025 ಫ್ರಾಸಾ-02
ಚಾಸಾ-02

ದಿನಾಂಕಃ 20-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಮಲ್ಲಮ್ಮ |
| **ತಂದೆಯ / ಗಂಡನ ಹೆಸರು** | ಸದಾಶಿವಪ್ಪ |
| **ವಯಸ್ಸು** | 52 |
| **ಉದ್ಯೋಗ** | ಅಂಗಡಿ ವ್ಯಾಪಾರ |
| **ವಾಸಸ್ಥಳ** | ಪೊನ್ನಸಮುದ್ರ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಚಾಸಾ-1 ನನ್ನ ಗಂಡ , ಆರೋಪಿಯ ಪರಿಚಯ ಇರುತ್ತದೆ. ನಾವು ಮೊದಲು ಪ್ರಸನ್ನಕುಮಾರ್ ರವರ ಮನೆಯಲ್ಲಿ ಬಾಡಿಗೆಗೆ 9 ವರ್ಷ ಇದ್ದೇವು. ನಾವು ಬಾಡಿಗೆ ಇದ್ದ ಮನೆಯ ಪಕ್ಕದ ಮನೆಗೆ 1 ನೇ ಆರೋಪಿ ಬಾಡಿಗೆಗೆ ಬಂದಿರುತ್ತಾನೆ. ಸದರಿ ಪ್ರಸನ್ನ ಕುಮಾರ್ ರವರ ಮನೆಯಲ್ಲಿ ಬಾಡಿಗೆಗೆ ಇದ್ದಾಗ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೇವು. 2022 ರಲ್ಲಿ ಆರೋಪಿ ನಮ್ಮ ಮನೆಯ ಬಾಗಿಲಿಗೆ ಬೆಂಕಿ ಹಚ್ಚಿರುತ್ತಾನೆ. ಇದರಿಂದ ಬಾಗಿಲು ಸುಟ್ಟು ಹೋಗಿರುತ್ತದೆ. ನಮ್ಮ ಅಂಗಡಿಯಲ್ಲಿ ವ್ಯಾಪಾರ ಆಗುವುದನ್ನು ನೋಡಿ ಸಹಿಸದೇ ಬೆಂಕಿ ಹಚ್ಚಿರುತ್ತಾನೆ. ಆರೋಪಿ ಕೂಡ ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿದ್ದ. ಬೆಂಕಿ ಹಚ್ಚಿದ್ದರಿಂದ ಪ್ರಸನ್ನಕುಮಾರ್ ರವರು ಮನೆ ಖಾಲಿ ಮಾಡಲು ಹೇಳಿದ್ದರಿಂದ ನಾವು ಮನೆ ಖಾಲಿ ಮಾಡಿರುತ್ತೇವೆ. ಬೇರೆ ಪೆಟ್ಟಿಗೆ ಅಂಗಡಿ ತೆಗೆದುಕೊಂಡು ಪ್ರಸನ್ನಕುಮಾರ್ ರವರ ಮನೆ ಹತ್ತಿರದ ಅಮರನಾಥ ರವರ ಜಾಗದಲ್ಲಿ ಪೆಟ್ಟಿಗೆ ಇಟ್ಟುಕೊಳ್ಳಲು ಹೋದಾಗ ಆರೋಪಿ ನೀವು ಪೆಟ್ಟಿಗೆ ಇಲ್ಲಿ ಇಡಬೇಡಿ ಎಂದು ತಕರಾರು ಮಾಡಿರುತ್ತಾನೆ.

2023 ರಲ್ಲಿ ಬೆಳಗಿನಜಾವ 3-00 ಗಂಟೆಗೆ 1 ನೇ ಆರೋಪಿ ಕಟ್ಟಿಗೆ ಪೆಟ್ಟಿಗೆ ಅಂಗಡಿಗೆ ಬೆಂಕಿ ಹಚ್ಚಿರುತ್ತಾನೆ, ಆ ದಿನ ನಾವು ಬೆಳಗಿನ ಜಾವ ಎದ್ದಿದಾಗ ಹೊಗೆ ಬರುತ್ತಿತ್ತು ಅದನ್ನು ನೋಡಿ ನಾನು ನನ್ನ ಗಂಡನಿಗೆ ಹೋಗಿ ನೋಡಿಕೊಂಡು ಬರಲು ಹೇಳಿದೆ. ಚಾಸಾ-1 ಹೋಗಿ ನೋಡಿ ನಮ್ಮ ಪೆಟ್ಟಿಗೆ ಅಂಗಡಿಯನ್ನು ಸುಟ್ಟು ಬಿಟ್ಟಿರುತ್ತಾರೆಂದು ಹೇಳಿರುತ್ತಾರೆ. ನಾನು ಕೂಡ ಸ್ಥಳಕ್ಕೆ ಹೋಗಿ ನೋಡಿದಾಗ ಪೆಟ್ಟಿಗೆ ಅಂಗಡಿ ಪೂರ್ತಿ ಸುಟ್ಟುಹೊಗಿತ್ತು. ಇದರಿಂದ ನಮಗೆ 10,000/- ನಷ್ಟವುಂಟಾಗಿರುತ್ತದೆ. ನಾವು ಸ್ಥಳಕ್ಕೆ ಹೋದಾಗ ಆರೋಪಿತರಿಬ್ಬರು ವೀರಭದ್ರದೇವಸ್ಥಾನದ ಕಡೆಯಿಂದ ಬಂದಿರುತ್ತಾರೆ. ನಾವು 10 ವರ್ಷದಿಂದ ವ್ಯಾಪಾರ ಮಾಡುತ್ತಿದ್ದರೂ ಯಾರು ಏನು ಮಾಡಿರುವುದಿಲ್ಲ ಆರೋಪಿತರು ನಮ್ಮ ಪಕ್ಕದಲ್ಲಿ ಬಂದಾಗಿನಿಂದ 2022 ಘಟನೆಯಾಗಿರುತ್ತದೆ ಆದ್ದರಿಂದ ಆರೋಪಿತರೇ ನಮ್ಮ ಪೆಟ್ಟಿಗೆ ಅಂಗಡಿ ಸುಟ್ಟಿರುತ್ತಾನೆಂದು ಹೇಳುತ್ತೇನೆ. ನಮ್ಮ ಮತ್ತು ಆರೊಪಿತರ ಅಂಗಡಿ ವ್ಯಾಪಾರಕ್ಕಿಂತ ನಮ್ಮ ಅಂಗಡಿ ವ್ಯಾಪಾರ ಚೆನ್ನಾಗಿತ್ತು. ಅದೇ ದ್ವೇಷದಿಂದ ಆರೋಪಿತರು ನಮ್ಮ ಅಂಗಡಿಗೆ ಬೆಂಕಿ ಹಚ್ಚಿರುತ್ತಾರೆ. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. 1 ನೇ ಆರೋಪಿ ನ್ಯಾಯಾಲಯದ ಮುಂದೆ ಹಾಜರಿದ್ದು ಅವರನ್ನು ನೋಡಿದರೆ ಗುರುತಿಸುತ್ತೇನೆ. **2 ನೇ ಆರೋಪಿ ಗೈರು ಹಾಜರಿದ್ದು ಅವರ ಗುರುತಿಸುವಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ.**

**<u>ಪಾಟೀಸವಾಲು ಶ್ರೀ. ಎಸ್.ಸಿ.ಜಿ. ವಕೀಲರಿಂದ ಆರೋಪಿ ಪರವಾಗಿ:-</u>**

ಅಮರನಾಥ ರವರ ಜಾಗದಲ್ಲಿ ಅಂಗಡಿ ಇಟ್ಟುಕೊಳ್ಳಲು ಯಾವುದೇ ಕರಾರು ಮಾಡಿಕೊಂಡಿರುವುದಿಲ್ಲ. ವೀರಣ್ಣ ರವರ ಹತ್ತಿರ ಯಾವುದೇ ಪಟ್ಟಿಗೆ ಅಂಗಡಿ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಪ್ರಸನ್ನಕುಮಾರ್ ರವರ ಮನೆಯಲ್ಲಿ ಬಾಡಿಗೆಗೆ ಇದ್ದೇವು, ನಮ್ಮ ಪೆಟ್ಟಿಗೆ ಅಂಗಡಿಯಲ್ಲಿ ನಾವು ಕಿರಾಣಿ ಸಾಮಾನುಗಳನ್ನು , ಪೆಟ್ರೋಲ್ , ಡೀಸಲ್ , ಬೆಂಡು , ಕಾಲರ್ ರಿಂಗ್ , ಪೈಪ್ಸ್ ರೈತರಿಗೆ ಬೇಕಾಗುವ ಸಾಮಗ್ರಿಗಳನ್ನು ಮಾರಾಟ ಮಾಡುತ್ತಿದ್ದೇವು. ಪ್ರಸನ್ನಕುಮಾರ್ ರವರ ಮನೆಯಲ್ಲಿ ಬಾಡಿಗೆಗೆ ಇದ್ದಾಗ ಮನೆಯಲ್ಲಿ ಅಂಗಡಿ ಇಟ್ಟುಕೊಂಡಿದ್ದು ಅಲ್ಲಿಯೂ ಕೂಡ ಪೆಟ್ರೋಲ್ ಡೀಸೆಲ್ ಮಾರಾಟ ಮಾಡುತ್ತಿದ್ದೇವು. ಪೆಟ್ರೋಲ್ , ಡೀಸೆಲ್ ಮಾರಾಟ ಮಾಡಲು ನಾವು ಯಾವುದೇ ಪರವಾನಿಗೆ ಪಡೆದುಕೊಂಡಿರಲಿಲ್ಲ. ಬಾಗಿಲು ಪಕ್ಕದಲ್ಲಿಯೇ ಪೆಟ್ರೋಲ್ ಡೀಸೆಲ್ ಇಡುತ್ತಿದ್ದೇವು ಎನ್ನುವುದು ನಿಜ.

ಪ್ರಸನ್ನಕುಮಾರ್ ರವರ ಮನೆಯ ಬಾಗಿಲಿಗೆ ಬೆಂಕಿ ಹಚ್ಚಿದಾಗ ನಾವು ಪೊಲೀಸರಿಗೆ ನನ್ನ ಗಂಡ ದೂರು ಕೊಟ್ಟಿದ್ದ. ಚಾಸಾ-1 ಬಾಗಿಲು ಸುಟ್ಟಾಗ ಯಾವುದೇ ದೂರು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಪೆಟ್ರೋಲ್ , ಡೀಸೆಲ್ ಇಟ್ಟುಕೊಂಡಿದ್ದರಿಂದ ಪೆಟ್ರೋಲ್ , ಡೀಸೆಲ್ ಬಾಗಿಲಿಗೆ ಬಿದ್ದು ಬೆಂಕಿ ಬಿದ್ದಿರುತ್ತದೆ ಎಂದರೆ ಸರಿಯಲ್ಲ. ಪೆಟ್ರೋಲ್ , ಡೀಸೆಲ್ ಮಾರಾಟ ಮಾಡುತ್ತಿದ್ದೀರಾ ಎಂದು ಹೇಳಿ ಪ್ರಸನ್ನಕುಮಾರ್ ರವರು ನಮ್ಮನ್ನು ಮನೆಯಿಂದ ಖಾಲಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಬಾಡಿಗೆಗೆ ಇದ್ದ ಮನೆ ಗೌರಜ್ಜಿದು ಎಂದರೆ ನಿಜ. ಪ್ರಸನ್ನಕುಮಾರ್ ಗೌರಜ್ಜಿಯ ಮೊಮ್ಮಗ, ಪ್ರಸನ್ನಕುಮಾರ್ ರವರಿಗೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಈರಣ್ಣ ರವರ ಬಳಿ ಪೆಟ್ಟಿಗೆ ಅಂಗಡಿ ಇರಲಿಲ್ಲ ಅವರ ಸೂಸೆ ಹತ್ತಿರ ಇತ್ತು ಎಂದರೆ ನಿಜ. ಸಾಕ್ಷಿ ಮುಂದುವರೆದು ಸೊಸೆ ಎಂದರೆ ಈರಣ್ಣನ ಹೆಂಡತಿಯ ತಂಗಿ ಅವಳು ಈರಣ್ಣನ ಮನೆಯಲ್ಲಿಯೇ ವಾಸ ಮಾಡುತ್ತಿದ್ದಳು. ನಾವು ಈರಣ್ಣನ ಸೊಸೆ ಕೈಗೆ ಪೆಟ್ಟಿಗೆ ಮಾರಾಟದ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ನಿಜ. ಪೆಟ್ಟಿಗೆ ಅಂಗಡಿ ಮೇಲೆ ಕಿತ್ತು ಹೋಗಿತ್ತು ಎಂದರೆ ನಿಜ. ಪೆಟ್ಟಿಗೆ ಅಂಗಡಿ ಪೂರ್ತಿ ಜಖಂ ಆಗಿದ್ದರಿಂದ ಆರೋಪಿ ಹೋಟೆಲ್ ನ ಉರುವಲಿಗಾಗಿ ಪೆಟ್ಟಿಗೆ ಅಂಗಡಿಯನ್ನು ಅವರ ಸೊಸೆಯಿಂದ ಖರೀದಿ ಮಾಡಿದ್ದರು ಎಂದರೆ ಸುಳ್ಳು.

ವೀರಭದ್ರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ಆರೋಪಿಯ ಹೋಟೆಲ್ ಪಕ್ಕದಲ್ಲಿ  ಪೆಟ್ಟಿಗೆ ಅಂಗಡಿಯನ್ನು ಮುರಿದು ಪೀಸುಗಳನ್ನಾಗಿ ಜೊಡಿಸಿ ಇಟ್ಟಿದ್ದರು ಎಂದರೆ ಸರಿಯಲ್ಲ. ನಾವು ಬೆಳಗಿನಜಾವ ಎದ್ದು ಸದರಿ ಪೆಟ್ಟಿಗೆ ಅಂಗಡಿ ಪೀಸುಗಳಿಗೆ ಬೆಂಕಿ ಹಚ್ಚಿದ್ದೇವೆ ಎಂದರೆ ಸುಳ್ಳು. ಬೆಂಕಿ ಹಚ್ಚಬೇಕು ಎನ್ನುವ ಉದ್ದೇಶದಿಂದ ಬೆಳಗಿನಜಾವ ನಾವು ಹೋಗಿದ್ದೇವು ಎಂದರೆ ಸರಿಯಲ್ಲ. ಆರೋಪಿತರು ಜಾಗದಲ್ಲಿ ಇರಲಿಲ್ಲ ಮನೆಯಲ್ಲಿ ಮಲಗಿದ್ದರು ನಾವು ಉದ್ದೇಶಪೂರ್ವಕವಾಗಿ ಆರೋಪಿತರ ಮೇಲೆ ಸುಳ್ಳು ಅಪಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಬಳಿ ಪೆಟ್ಟಿಗೆ ಅಂಗಡಿ ಇತ್ತು ಎಂದು ಹೇಳಲು ಯಾವುದೇ ದಾಖಲೆ ಇಲ್ಲ ಎಂದರೆ ನಿಜ.

ನಮಗೂ ಆರೋಪಿಗೂ ವ್ಯಾಪಾರದ ವಿಷಯದಲ್ಲಿ ಜಗಳ ಆಗುತ್ತಿತ್ತು ಎಂದರೆ ನಾವು ಜಗಳ ಮಾಡುತ್ತಿರಲಿಲ್ಲ ಆರೋಪಿತರೇ ಜಗಳ ಮಾಡುತ್ತಿದ್ದರು. ಆರೋಪಿತರ ಮೇಲೆ ಉದ್ದೇಶಪೂರ್ವಕವಾಗಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಗಂಡ 12 ವರ್ಷಗಳಿಂದ ಕುಡಿತವನ್ನು ಬಿಟ್ಟಿರುತ್ತಾರೆ. ನನ್ನ ಗಂಡ ಕುಡಿದು ಎಲ್ಲಂದರೆ ಅಲ್ಲಿ ಬೀಳುತ್ತಿದ್ದರು ಯಾರಾದರೂ ಅವರನ್ನು ಎತ್ತಿಕೊಂಡು ಬಂದು ಮನೆಗೆ ಬಿಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನನ್ನ ಗಂಡ ಕುಡಿದು ಪೆಟ್ರೋಲ್ ತೆಗೆದುಕೊಂಡು ಹೋಗಿ ಪೆಟ್ಟಿಗೆ ಅಂಗಡಿ ಪೀಸುಗಳಿಗೆ ಬೆಂಕಿ ಹಚ್ಚಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ಹೋಟೆಲ್ ಮುಂದೆ ನಾವು ಬೆಂಕಿ ಹಚ್ಚಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರವರೇ ನಮ್ಮ ಮನೆಯ ಬಾಗಿಲಿಗೆ , ಆರೋಪಿ ಹೋಟೆಲ್ ಗೆ ಮತ್ತು ಪೆಟ್ಟಿಗೆ ಅಂಗಡಿ ಪೀಸುಗಳಿಗೆ ಬೆಂಕಿ ಹಚ್ಚಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿದ್ದೆ ಅಲ್ಲಿ ಸಹಿ ಹಾಕಿರುತ್ತೇನೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸುಳ್ಳು.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**